ಇದಕ್ಕೆ ಬೇಕಾಗುವ ಪರಿಯೋಜನಾ ವರದಿಯನ್ನು ತಯಾರಿಸಲಾಗಿದ್ದು ಇದಕ್ಕೆ ಮಂಡಳಿಯು ಮಂಜೂರಾತಿಯನ್ನು ನೀಡಿದೆ. ಈ ಕೇಂದ್ರಕ್ಕೆ ತಗಲುವ ಅಂದಾಜು ವೆಚ್ಚ 34.44 ಲಕ್ಷ ರೂಪಾಯಿಗಳು. ಈ ಪರಿವರ್ತಕವನ್ನು ಒದಗಿಸಲು ನೂತನ ಸರ್ಕಾರೀ ವಿದ್ಯುತ್ ಕಾರ್ಖಾನೆಗೆ ಕ್ರಯಾದೇಶ ನೀಡಲಾಗಿದ್ದು ಏಪ್ರಿಲ್ ತಿಂಗಳಲ್ಲಿ ಇದು ಸರಬರಾಜಾಗುವ ನಿರೀಕ್ಷೆ ಇದೆ. ಇದಕ್ಕೆ ಬೇಗಾಕುವ 110 ಕೆ.ವಿ. ಬ್ರೇಕರ್ ಸ್ವಿಚ್‌ಗೇರ್ ಮುಂತಾದ ಸಲಕರಣೆಗಳನ್ನು ಒದಗಿಸಲಾಗೂತ್ತಿದ್ದು ಈ ಕಾರ್ಯ ತ್ವರಿತಗತಿಯಲ್ಲಿ ನಿರ್ವಹಿಸಲು ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಈ ಕೆಲಸವು ಮೇ ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಕೈಗಾರಿಕೆಗಳಿಗಾಗಿ ವಿದ್ಯುಚ್ಛಕ್ತಿಯನ್ನು ಬೇಡಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುತ್ತಿದ್ದು, ಬೇಕಾಗುವ ವಿದ್ಯುತ್ತನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಮಂಗಳೂರು ವಲಯದ ಮುಖ್ಯ ಅಭಿಯಂತರ(ವಿ) ರು ಈ ಕೆಲಸವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕಾರ್ಯೋನ್ಮುಖರಾಗಿದ್ದಾರೆ.

ಪ್ರಕಟಣೆ

ಅಧ್ಯಕ್ಷರು: ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲುನಾನು ನಿರ್ದೇಶನ ಮಾಡಿದ್ದೇನೆ.

ಶ್ರೀಮತಿ ಮೋಟಮ್ಮ

ಶ್ರೀಮತಿ ಸುಮಾವಸಂತ್

ಶ್ರೀ ಬಿ.ಎಂ. ಇದಿನಬ್ಬ

ಶ್ರೀ ಜಿ.ಎಸ್. ಆಚಾರ್

ಶ್ರೀ ಬಸವರಾಜು ಪಾಟೀಲ್ ಅಟ್ಟೂರ್

CALLING ATTENTION TO MATTERS OF URGENT PUBLIC IMPORTANCE:

1. Shortage of drinking water in Bangalore City

SRI R.V.DESHPANDE: Sir, I call the attention of the Hon'ble Minislter of Urban Development to the acute Shortage of drinking water in Bangalore City.

+ SRI K.J.GEORGE (Minister for Urban Development):

Sir with your permission, I wish to make the following statement.

ಬೆಂಗಳೂರು ನಗರಕ್ಕೆ ಸಾಮಾನ್ಯ ಸ್ಥಿತಿಯಲ್ಲಿ 430 ದಶಲಕ್ಷ ಲೀಟರುಗಳಷ್ಟು ನೀರು ಸರಬರಾಜಾಗುತ್ತಿದ್ದು ಇದರಲ್ಲಿ 280 ದಶಲಕ್ಷ ಲೀಟರ್‌ಗಳಷ್ಟು ಪ್ರಮಾಣ ಕಾವೇರಿ ನದಿಯಿಂದಲೂ 15ದಶಲಕ್ಷ ಲೀಟರ್ ಪ್ರಮಾಣ ಹೆಸರುಘಟ್ಟ ಜಲಾಶಯದಿಂದಲೂ ಮತ್ತು 135 ದಶಲಕ್ಷ ಲೀಟರ್ ಪ್ರಮಾಣವು ತಿಪ್ಪಗೊಂಡನಹಳ್ಳಿ ಜಲಾಶಯದಿಂದಲೂ ದೊರಕ್ಕುತ್ತಿದೆ. ಕಳೆದ ಎರಡು ವರ್ಷಗಳಿಂದ ಅರ್ಕಾವತಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆಯ ವಿಫಲತೆಯಿಂದಾಗಿ ಮೇಲಿನ ಎರಡೂ ಮೂಲಗಳಲ್ಲಿ ನೀರಿನ ಶೇಖರಣೆ ಪ್ರಮಾಣವು ಕಡಿಮೆಯಾಗಿದ್ದು ಜಲಪೂರೈಕೆಯ ದೂರುಗಳ ಹೆಚ್ಚಳಕ್ಕೆ ಕಾರಣವಾಗಿದೆ.

1985-86ನೇ ವರ್ಷದಲ್ಲಿಯೂ ಸಹ ಇದೇ ಪರಿಸ್ಥಿತಿಯಿಂದಾಗಿ ಈ ಜಲಾಶಯಗಳು ಬತ್ತಿ ಹೋಗಿದ್ದು ಸುಮಾರು ನಗರದ ಅರ್ಧ ಭಾಗದಷ್ಟು ಪ್ರದೇಶಕ್ಕೆ ದಿನ ಬಿಟ್ಟು ದಿನ ಜಲಪೂರೈಕೆ ಮಾಡಲಾಗುತ್ತಿತ್ತು. 1985-86ರಿಂದ ಇಲ್ಲಿಯವರೆವಿಗೂ ಗೃಹ ಸಂಪರ್ಕಗಳು 1,40,508 ರಿಂದ 2.04,855 ವರೆವಿಗೂ ಮತ್ತು ಗೃಹೇತರ ಸಂಪರ್ಕಗಳು 10,709 ರಿಂದ 12.500 ವರೆವಿಗೂ ಮತ್ತು ಬಲ್ಕ್ ಮೀಟರ್ ಸಂಪರ್ಕಗಳು 21 ರಿಂದ 123 ವರೆವಿಗೂ ಜೊತೆಗೆ ಸಾರ್ವಜನಿಕ ಕೊಳಾಯಿಗಳು 3307 ರಿಂದ 4604 ವರೆವಿಗೂ ಹೆಚ್ಚಳವಾಗಿದ್ದು ಆದರೆ ನಗರಕ್ಕೆ ಸರಬರಾಜು ಆಗುತ್ತಿರುವ ಪ್ರಮಾಣ ಮಾತ್ರ ಮೊದಲಿನಷ್ಟೆ ಇರುತ್ತದೆ. ಕಳೆದ ಎರಡು ವರ್ಷಗಳಿಂದಲೂ ಮಳೆಯ ವಿಫಲತೆಯಿಂದಾಗಿ ತಿಪ್ಪಗೊಂಡನಹಳ್ಳಿಯ ಜಲಾಶಯಕ್ಕೆ 1989ನೇ ವರ್ಷದಲ್ಲಿ ಕೇವಲ 6 ತಿಂಗಳಿಗಾಗುವಷ್ಟು ನೀರಿನ ಶೇಖರಣೆಯು ಮತ್ತು 1990ನೇ ವರ್ಷದಲ್ಲಿ 40 ದಿನಗಳಿಗಾಗುವಷ್ಟು ಶೇಖರಣೆಯು ದೊರಕಿರುತ್ತದೆ. 1990ನೇ ವರ್ಷದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹರಿದು ಬಂದಿರುವ ನೀರಿನ ಪ್ರಮಾಣವು ಅದು ನಿರ್ಮಿತವಾದಾಗಿನಿಂದಲೂ ಅತ್ಯಂತ ಕನಿಷ್ಠ ಪ್ರಮಾಣದಲ್ಲಿರುತ್ತದೆ. ಹೆಸರುಘಟ್ಟ ಮೂಲದಿಂದ ನಗರಕ್ಕೆ ಪಂಪ್ ಮಾಡಲಾಗುತ್ತಿದ್ದ ನೀರನ್ನು ನಿಲ್ಲಿಸಲಾಗಿದ್ದು ಈ ಮೂಲದಿಂದ ಅತಿ ಕನಿಷ್ಠ ಪ್ರಮಾಣವನ್ನು ಮಾತ್ರ ಮಾರ್ಗ ಮಧ್ಯದಲ್ಲಿರುವ ಸಂಪರ್ಕಗಳಿಗೆ ಒದಗಿಸಲಾಗುತ್ತಿದೆ. ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಪಂಪ್ ಮಾಡುತ್ತಿದ್ದ 135 ದಶಲಕ್ಷ ಲೀಟರ್ ಪ್ರಮಾಣದ ನೀರನ್ನು ಸದ್ಯಕ್ಕೆ 30 ದಶಲಕ್ಷ ಲೀಟರುಗಳಿಗೆ ಕನಿಷ್ಠಗೊಳಿಸಲಾಗಿದ್ದು ಮತ್ತು ಇನ್ನು ಕೆಲವು ದಿನಗಳೊಳಗಾಗಿ ಇದು ಸಂಪೂರ್ಣವಾಗಿ ನಿಂತು ಹೋಗುತ್ತದೆ. ನಗರವು ತನ್ನ ಬೇಡಿಕೆಯ ಪೂರ್ಣ ಪ್ರಮಾಣದ ನೀರನ್ನು ಕಾವೇರಿ ಮೂಲದಿಂದ ಪ್ರತಿನಿತ್ಯ ಸರಬರಾಜಾಗುತ್ತಿರುವ 280 ದಶಲಕ್ಷ ಲೀಟರ್‌ನಿಂದಲೇ ನಡೆಸಬೇಕಾಗುತ್ತದೆ. ಈ ಕ್ಲಿಷ್ಟ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1) 1990 ಅಕ್ಟೋಬರ್ ಮಾಹೆಯಿಂದ ನಗರದಲ್ಲಿ ವಾರದಲ್ಲಿ ಒಂದು ದಿನ ನೀರು ನಿಲ್ಲಿಸಲು ಕ್ರಮ ಕೈಗೊಂಡಿದ್ದು ಮತ್ತು ಈ ತಿಂಗಳಿನಿಂದ ಅಂದರೆ ಮಾರ್ಚಿ 1991ರಿಂದ ವಾರಕ್ಕೆ ಎರಡು ದಿನ ನೀರನ್ನು ನಿಲ್ಲಿಸಿ ಸಂಗ್ರಹಣವನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ಪ್ರತಿ ಮಂಗಳವಾರ ಮತ್ತು ಶನಿವಾರಗಳಂದು ನಗರದಲ್ಲಿ ಜಲ ಪೂರೈಕೆಯನ್ನು ಮಾಡಲಾಗುತ್ತಿಲ್ಲ.

2) 1985-86 ರಲ್ಲಿ 944 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು ಒಟ್ಟು ಕೊಳವೆ ಬಾವಿಗಳ ಸಂಖ್ಯೆಯನ್ನು 1670ಕ್ಕೆ ಏರಿಸಲಾಗಿದೆ. ಈ ಕೊಳವೆ ಬಾವಿಗಳಲ್ಲಿ ಘಂಟೆಗೆ 1000 ಗ್ಯಾ.ನೀರನ್ನು ನೀಡುತ್ತಿರುವ 394 ಕೊಳವೆ ಬಾವಿಗಳನ್ನು ಗುರ್ತಿಸಲಾಗಿದ್ದು ಇವುಗಳಿಗೆ ವಿದ್ಯುತ್ ಪಂಪ್ ಅಳವಡಿಸುವ ಕ್ರಮ ಕೈಗೊಂಡಿದ್ದು ಮತ್ತು ಸಣ್ಣ ಶೇಕರಣಾ ನೀರಿನ ಟ್ಯಾಂಕ್ ಹಾಗೂ ಸಾರ್ವಜನಿಕ ಕೊಳಾಯಿಗಳನ್ನು ಅಳವಡಿಸಿ ಆ ಸ್ಥಳೀಯ ಬವಣೆಯನ್ನು ನೀಗಿಸಲು ಉದ್ದೇಶಿಸಲಾಗಿದೆ.

3) ನಗರದ ವಿವಿಧ ಭಾಗಗಳಲ್ಲಿ 300 ಕೊಳವೆ ಬಾವಿಗಳನ್ನು ತೋಡಲು ಮಂಡಳಿಯು ಕ್ರಮ ಕೈಗೊಂಡಿದ್ದು ಈ ದಿಶೆಯಲ್ಲಿ ಕೆಲಸಗಳನ್ನು ಪ್ರಾರಂಭಿಸಲಾಗಿದೆ. ಜೊತೆಗೆ ಬೆಂಗಳೂರು ಮಹಾನಗರ ಪಾಲಿಕೆಯು ಸಹ 300 ಕೊಳವೆ ಬಾವಿಗಳನ್ನು ತೋಡಿಸುವ ಕೆಲಸವನ್ನು ಪ್ರಾರಂಭಿಸಿದೆ.

4) ಜಲ ಪೂರೈಕೆ ವ್ಯವಸ್ಥೆಗಳಿಗೆ ಮತ್ತು ಕೊಳವೆ ಬಾವಿಗಳನ್ನು ತೋಡಲು ಮಂಡಲಿಗೆ ಸಲಹೆ ನೀಡಲು ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಸ್ಥಳೀಯ ನಗರಸಭಾ ಸದಸ್ಯರುಗಳನ್ನು ಒಳಗೊಂಡಂತೆ ಸಮಿತಿಯನ್ನು ನಿರ್ಮಿಸಿ

ಮಂಡಳಿಯ ಕಾರ್ಯ ನಿರ್ವಾಹಕ ಅಭಿಯಂತರರನ್ನು ಸಂಚಾಲಕರನ್ನಾಗಿ ನೇಮಿಸಲಾಗಿದೆ.

5) ಅಭಾವ ಪ್ರದೇಶದಲ್ಲಿ ನೀರನ್ನು ಪೂರೈಸಲು 33 ಟ್ಯಾಂಕರ್‌ಗಳನ್ನು ಹೊತ್ತ ಲಾರಿಗಳನ್ನು ಮಂಡಳಿಯ ಸೇವಾ ಠಾಣೆಗಳಿಗೆ ಒದಗಿಸಲಾಗಿದೆ. ಈ ಟ್ಯಾಂಕರ್‌ಗಳ ಸಂಖ್ಯೆಯನ್ನು ಮತ್ತೂ ಹೆಚ್ಚಿಸಲಾಗುತ್ತದೆ ರಕ್ಷಣಾ ಇಲಾಖೆಯ ನಿವೃತ್ತ ಚಾಲಕರನ್ನು ಈ ಕೆಲಸಗಳಿಗೆ ನೇಮಿಸಲಾಗಿದೆ.

6) ಕೊಳವೆ ಬಾವಿಗಳ ಶೀಘ್ರ ದುರಸ್ತಿಗಾಗಿ ಮೂರು ನಿರ್ವಹಣಾ ವಿಭಾಗಗಳನ್ನು ಮಾಡಲಾಗಿದೆ.

7) ಗೃಹೇತರ ಬಳಕೆಗೆ ಸಂಪರ್ಕಗಳನ್ನು ಹಾಗೂ ಹೊಸ ಬಡಾವಣೆಗಳಿಗೆ ಸಂಪರ್ಕಗಳ ಮಂಜೂರಾತಿಯನ್ನು ತಕ್ಷಣವೇ ನಿಲ್ಲಿಸಲಾಗಿದೆ.

8) ಮಂಡಳಿಯ 31 ಸೇವಾ ಕೇಂದ್ರಗಳಲ್ಲಿ 16 ಸೇವಾ ಕೇಂದ್ರಗಳಿಗೆ ಮಂಡಳಿಯ ಹಿರಿಯ ಅಧಿಕಾರಿಗಳನ್ನು ನಿಯೋಜಿಸಿದ್ದು ಸಾರ್ವಜನಿಕ ನೀರಿನ ದೂರುಗಳನ್ನು ಸ್ವೀಕರಿಸಲು ಹಾಗೂ ಜಲಪೂರೈಕೆಯ ವ್ಯವಸ್ಥೆಯನ್ನು ಮಾಡಲು ನೇಮಿಸಲಾಗಿದೆ. ಈ ಅಧಿಕಾರಿಗಳು ಸೇವಾಠಾಣೆಯಲ್ಲಿ ಬೆಳಿಗ್ಗೆ 5.00ಘಂಟೆಯಿಂದ 8.00 ಘಂಟೆಯವರೆವಿಗೂ ಖುದ್ದಾಗಿ ಹಾಜರಿರುತ್ತಾರೆ.

9) ಕಾವೇರಿ ಮೂರನೆ ಹಂತದ ಯೋಜನೆಯ ಅಂಗವಾದ ನೀರಿನ ಉತ್ಪಾದನೆ ಮತ್ತು ಅದನ್ನು ನಗರಕ್ಕೆ ತಂದು ವಿತರಣೆ ಮಾಡುವ ಕೆಲಸವನ್ನು ಈ ವರ್ಷದ ಅಂತ್ಯದೊಳಗೆ ಮುಗಿಸಲು ಸರ್ಕಾರವು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಇದರ ಪರಿಣಾಮವಾಗಿ 270 ದಶಲಕ್ಷ ಲೀಟರ್ ನೀರನ್ನು ಪ್ರತಿನಿತ್ಯ ನಗರಕ್ಕೆ ತರಲು ಉದ್ದೇಶಿಸಲಾಗಿದೆ. ಈ ಕಾರ್ಯದಿಂದಾಗಿ ಮುಂಬರುವ ಬೇಸಿಗೆಯ ದಿನಗಳಲ್ಲಿ ಅಂದರೆ 1992-93ನೇ ವರ್ಷದಿಂದಾಚೆಗೆ ಈ ರೀತಿ ಕ್ಲಿಷ್ಟ ಪರಿಸ್ಥಿತಿ ಇದ್ದರೂ ನೀರಿಗೆ ಈ ಸಾರಿಯ ಬವಣೆ ಇರುವುದಿಲ್ಲ.

1.10 ಪಿ.ಎಂ

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರ ಹೇಳಿಕೆಯಲ್ಲಿ ಕೇವಲ ಅಧಿಕಾರಿಗಳು ಏನೊಂದು ಮಾಹಿತಿಗಳನ್ನು ಪೂರೈಸಿದ್ದಾರೆ ಅದನ್ನಷ್ಟೇ ಕೊಟ್ಟಿದ್ದಾರೆ ಇಂತಹ ಒಂದು ಕುಡಿಯುವ ನೀರಿನ ಅಭಾವ ಬೆಂಗಳೂರಿನಲ್ಲಿದ್ದಾಗ ನಾನು ಸ್ವತಃ ಏನು ಮಾಡಿದ್ದೇನೆ ಅಥವಾ ಯಾವ ಏರಿಯಾಕ್ಕೆ ವಿಸಿಟ್ ಮಾಡಿದ್ದೇನೆ ಎಂದು ಇದರಲ್ಲಿ ಸ್ಪಷ್ಟವಾಗಿ ಕಾಣಿಸಿಲ್ಲ. ಇದಕ್ಕಿಂತಲೂ ಹೆಚ್ಚಾದ ಕುಡಿಯುವ ನೀರಿನ ಸಮಸ್ಯೆ 1985-86ರಲ್ಲಿ ಇತ್ತು ಆ ಸಮಯದಲ್ಲಿ ಸಹ ಈ ಕುಡಿಯುವ ನೀರಿನ ಸಮಸ್ಯೆಯನ್ನು ದೂರ ಮಾಡಲಿಕ್ಕೆ ಸಾಕಷ್ಟು ಕಾರ್ಯಕ್ರಮ ಸರ್ಕಾರದಿಂದ ಆಯಿತು. ಇದನ್ನು ತಾವು ಸಹ ಒಪ್ಪಿಕೊಂಡಿದ್ದೀರಿ 85-86ರಲ್ಲಿ 944 ಬೋರ್‌ವೆಲ್‌ಗಳನ್ನು ಡ್ರಿಲ್ ಮಾಡಲಾಯಿತೆಂದು ಹೇಳಿದ್ದೀರಿ. ನಮ್ಮ ಸರ್ಕಾರದ ಇದ್ದಾಗ ಸಚಿವರಾಗಲೀ ಮುಖ್ಯಮಂತ್ರಿಗಳಾಗಲೀ ಇಂತಿಂಥ ಸ್ಥಳಗಳಿಗೆ ಭೇಟಿ ಕೊಟ್ಟು ಜನರ ಸಮಸ್ಯೆಯನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ ತಾವು ತಮ್ಮ ಕ್ಷೇತ್ರವನ್ನು ಬಿಟ್ಟು ಬೆಂಗಳೂರು ಪಟ್ಟಣದಲ್ಲಿ ಎಲ್ಲಿಯೂ ಹೋಗಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ ಯಾವ ಸಮಸ್ಯೆ ಇದೆ ಏನು ನಡೆಯುತ್ತಿದೆ ಎಂದು ನಿಮಗೆ ಗೊತ್ತಿಲ್ಲ ನಾನು ರಾಜಮಹಲ್ ಬಡಾವಣೆಗೆ ಹೋಗಿದ್ದೆ ಅಲ್ಲಿ ಐದು ದಿವಸಗಳಿಂದ ನೀರಿಲ್ಲವೆಂದು ಹೇಳಿದರು. ಟಾಯಲೆಟ್‌ಗೂ ನೀರಿಲ್ಲ ಕುಡಿಯುವುದಕ್ಕೆ ನೀರಿಲ್ಲ. ಬೆಂಗಳೂರು ನೀರು ಸರಬರಾಜು ಮಂಡಳಿಯ ಚೀರ್ಮನ್‌ರಿಗೆ ಫೋನ್ ಮಾಡಿದರೆ ಗಂಟೆ ಹೊಡೆದು ಕೊಂಡರೂ ತಗೆದುಕೊಳ್ಳುವವರು ಇಲ್ಲ. ಚೀಫ್ ಇಂಜಿನಿಯರ್‌ಗೆ ಫೋನ್ ಮಾಡಿದರೆ ಫೋನ್

ಡಿಸ್‌ಕನೆಕ್ಟ್ ಆಯಿತೆಂದು ಅವರು ಹೇಳಿದರು. Then I talked to the Commissioner of the Corporation and then I talked to the H.U.D. Secretary.

ಅವರು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರು ಆದರೆ ಇದುವರೆಗೂ ಯಾವ ಕಾರ್ಯಕ್ರಮವೂ ಇಲ್ಲ. ಯಾವ ಪ್ರಕಾರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಎಂದು ತಾವು ಹೇಳಿದ್ದೀರಿ ಆದರೆ ಅದನ್ನು ಇಂಪ್ಲಿಮೆಂಟ್ ಮಾಡುವ ಬಗ್ಗೆ ಏನು ಮಾಡಿದ್ದೀರಿ? ಶ್ರೀ ರಾಮಕೃಷ್ಣ ಹೆಗಡೆಯವರು ಇದ್ದಾಗ ಕಾವೇರಿ ಮೂರನೆ ಸ್ಟೇಜ್ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದಿರಿ. ಆದರೆ ಸ್ವಾಮಿ ನಾನು ಹೆಚ್.ಯು.ಡಿ.ಮಂತ್ರಿಗಯಾಗಿದ್ದಾಗ with in three months I finalised all the works. ಸಾಕಷ್ಟು ಹಣ ಕೊಟ್ಟಿದ್ದೇವೆ ಆದರೆ ಕಳೆದ ಆರು ವರ್ಷಗಳಲ್ಲಿ ಈ ಮೂರನೇ ಸ್ಟೇಜ್ ಯೋಜನೆಗೆ ಅಡ್ವಿಕ್ಟೇಟ್ ಹಣ ಕೊಟ್ಟಿಲ್ಲ ಇನ್‌ಟೈಮ್ ಹಣ ಕೊಟ್ಟಿಲ್ಲ ಈ ಕಾರಣದಿಂದ ಈ ಸಮಸ್ಯೆ ನಿರ್ಮಾಣವಾಗಿದೆ. ಇಷ್ಟೇ ಅಲ್ಲ ತಿಪ್ಪಗೊಂಡನಹಳ್ಳಿ ಕೆರೆಗೆ ನೀರು ಬರಬೇಕಾದರೆ ನವೆಂಬರ್ ಡಿಸೆಂಬರ್10ನೇ ತಾರೀಖಿಗೆ ಮಳೆಯಾದರೆ ಅರ್ಕಾವತಿ ನದಿಯಿಂದ ನೀರು ಫ್ಲೋ ಆಗುತ್ತದೆ ಆದರೆ ಈ ಪೀರಿಯೆಡ್‌ನಲ್ಲಿ ಮಳೆ ಆಗಲಿಲ್ಲ. So you should have visualised. ಡಿಸೆಂಬರ್ 15ಕ್ಕೆ ಇದನ್ನು ಗಮನಿಸಬೇಕಾಗಿತ್ತು. ಮಳೆ ಆಗಲಿಲ್ಲ ಮತ್ತು ಇದರಿಂದ ನೀರಿನ ಅಭಾವ ಬರುತ್ತದೆ ಎಂದು ಮೊದಲೇ ಗೊತ್ತಾಗಬೇಕಿತ್ತು you should have understood it and the Government should have taken steps.

ಆದರೆ ತಾವು ಏನೂ ಮಾಡಲಿಲ್ಲ ಕಳೆದ ಎರಡು ತಿಂಗಳಿಂದ ಹೇಳಿಕೆಯನ್ನು ಕೊಡುತ್ತಿದ್ದೀರಿ ಕಾರ್ಪೋರೇಷನ್ ಮುಖಾಂತರ 300 ಕೊಳವೆ ಬಾವಿಗಳನ್ನು ಡ್ರಿಲ್ ಮಾಡುತ್ತೇವೆ ಸರ್ಕಾರದಿಂದ 300 ಮಾಡುತ್ತೇವೆ. ಎಂದು ಆದರೆ ಇವತ್ತಿನವರೆಗೆ ಕೇವಲ 7 ಬೋರ್‌ವೆಲ್‌ಗಳು ಮಾತ್ರ ಡ್ರಿಲ್ ಆಗಿವೆ. ಅವುಗಳಲ್ಲಿ ಆರು ನಿಮ್ಮ ಕ್ಷೇತ್ರದಲ್ಲಿಯೇ ಆಗಿದೆ. ನಿಮ್ಮ ಕ್ಷೇತ್ರದಲ್ಲಿ ಮಾಡಿ ಬೇಡವೆಂದು ನಾನು ಹೇಳುವುದಿಲ್ಲ. ಆದರೆ ತಾವು ನಿಜವಾಗಿ ಒಬ್ಬ ಸಚಿವರಾಗಿ ಇಡೀ ಬೆಂಗಳೂರಿಗೆ ರಾಜ್ಯಕ್ಕೆ ಸಂಬಂಧಪಟ್ಟಂತೆ ಕೆಲಸ ಮಾಡಬೇಕೆ? ಬೇಡವೆ ಇದು ಕೇವಲ ನಿಮ್ಮ ಕ್ಷೇತ್ರಕ್ಕೆ ಸೀಮಿತವಾಗಿದ್ದರೆ ಬೇರೆ ಭಾಗದ ಜನರು ಏನು ಮಾಡಬೇಕು? ಇದನ್ನು ತಾವು ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ ಬಹಳ ಗಂಭೀರವಾದ ಸಮಸ್ಯೆ ಇದೆ. ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ High yeilding borewells ಮಾಡುತ್ತೇವೆ ಎಂದು ಹೇಳುತ್ತಿದ್ದೀರಿ. ಇದನ್ನು ಮಾಡಿ. ಆದರೆ ತಮ್ಮ ಸ್ಟೇಟ್‌ಮೆಂಟ್‌ನಲ್ಲಿ 45 ದಿವಸದಲ್ಲಿ ಮಾಡುತ್ತೇವೆ ಎಂದು ಹೇಳಿದ್ದಿರಿ. You have to do it on a war footing.

ಹಣ ಇನ್ನೂ ಬಿಡುಗಡೆ ಆಗಿಲ್ಲ ಕಾರ್ಪೋರೆಷನ್‌ನಲ್ಲಿ ಹಣ ಇಲ್ಲ ರಸ್ತೆ ರಿಪೇರಿ ಮಾಡುವುದಕ್ಕೆ ಅವರ ಹತ್ತಿರ ಹಣ ಇಲ್ಲ ಹಾಗೆಯೇ ಸರ್ಕಾರದಿಂದಲೂ ಹಣ ಬಿಡುಗಡೆಯಾಗಿಲ್ಲ Have you released any amount for water supply scarcity in Bangalore?

ಎಷ್ಟು ಹಣ ಕೊಟ್ಟಿರುವ ಬಗ್ಗೆ ಹೇಳಿಲ್ಲ ಏನು ಕ್ರಮ ಸರ್ಕಾರ ಹಾಕಿಕೊಂಡಿದೆ ಎಂದು ಇಲ್ಲ ಬರೀ ಕಾರ್ಪೋರೆಷನ್‌ನಿಂದ ಇದು ಆಗುವುದಿಲ್ಲ ಬಿ.ಡಬ್ಲ್ಯು.ಎಸ್.ಎಸ್.ಬಿಯಲ್ಲೂ ಹಣ ಇಲ್ಲ They have also not got adequate funds.

ಆದ್ದರಿಂದ ಈ ಬರಗಾಲದ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಆದರೆ ಇದರ ಬಗ್ಗೆ ಎಷ್ಟು ಹಣ ರಿಲೀಸ್ ಆಗಿದೆಯೆಂದು ಹೇಳಬೇಕು ನಾಳೆಯಿಂದ ರಾಜ್ಯದ ಎಲ್ಲ ವಿರೋಧ ಪಕ್ಷದವರು ಜನತಾದಳ ಸಿಪಿಐ, ಸಿ.ಪಿ.ಐ.ಎಂ, ಡಿ.ಎಂ.ಕೆ ಮೊದಲಾದ ಪಕ್ಷಗಳು ಧರಣಿ ಸತ್ಯಾಗ್ರಹ ಮಾಡಲಿದ್ದಾರೆ

ಬೆಂಗಳೂರು ನಗರದ ಕುಡಿಯುವ ನೀರಿನ ಅಭಾವದ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ಎಂಬುದನ್ನು ಹೇಳಬೇಕು. ಮತ್ತು ಈ ಸಮಸ್ಯೆಯನ್ನು ನೀಗಿಸುವುದಕ್ಕೆ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ಅದೇನೆಂದರೆ,ಇವತ್ತು ತಾವು 600 ಬೋರ್‌ವೆಲ್ಸ್‌ಗಳನ್ನು ಹಾಕುತ್ತಿದ್ದೀರಿ, ಇವುಗಳನ್ನು ಇನ್ನು ಕನಿಷ್ಟ 15 ದಿವಸದೊಳಗಾಗಿ ವ್ಯವಸ್ಥೆ ಮಾಡಬೇಕು. ಈ ಪ್ರಕಾರ ವೇಗವಾಗಿ ಕೆಲಸ ಮಾಡಬೇಕಾಗುತ್ತದೆ. ಎರಡನೆಯದು ತಾವು 396 ಹೈಯೀಲ್ಡ್ ಬೋರ್‌ವೆಲ್ಸ್ ಎಂದು ಹೇಳಿದ್ದೀರಿ. ನನ್ನ ಪ್ರಕಾರ 450 ಹೈಯೀಲ್ಡ್ ಬೋರ್‌ವೆಲ್ಸ್ ಕೂಡ ಇದೆ. ಇವುಗಳನ್ನ ಮಿನಿವಾಟರ್ ಸಪ್ಲೈ ಸ್ಕೀಮ್ಸ ಅಥವಾ ಬೇರೆ ರೂಪದಲ್ಲಿ ಅಳವಡಿಸಿ, ಆದಷ್ಟು ಬೇಗನೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡಬೇಕು.ಮೂರನೆಯದು, ಮಿನಿವಾಟರ್ ಸ್ಕೀಮ್ಸ್ ಏನು ಮಾಡುತ್ತೀರಿ, ಟ್ಯಾಂಕ್ ಕಟ್ಟಿ, ನೀರನ್ನು ಸ್ಟೋರೇಜ್ ಮಾಡಿ, ಅದರ ಮುಖಾಂತರ ನೀರನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೆ ಕನ್‌ಸ್ಟ್ರಕ್ಷನ್ಸ್ ಆಕ್ಟಿವಿಟೀಸ್ ಏನು ಬೆಂಗಳೂರಿನಲ್ಲಿ ನಡೆಯುತ್ತಿವೆ. ಇವುಗಳಿಗೆ ಕುಡಿಯುವ ನೀರನ್ನು ಕೊಡಬಾರದು. ಇವತ್ತು ಡ್ರಿಂಕಿಂಗ್ ವಾಟರ್‌ನ್ನು ನೀವು ಈ ಕೆಲಸಗಳಿಗೆ ಕೊಡುತ್ತಿದ್ದೀರಿ. ಕನಿಷ್ಟ ಎರಡು ತಿಂಗಳು ದಯಮಾಡಿ ಕನ್‌ಸ್ಟ್ರಕ್ಷನ ಆಕ್ಟಿವಿಟೀಸ್‌ಗಳಿಗೆ ಈ ಕುಡಿಯುವ ನೀರನ್ನು ಬಿಡುಗಡೆ ಮಾಡಬಾರದು. ಅದೇ ಪ್ರಕಾರ ತಾವು 1985-86ನೇ ಇಸವಿಯಲ್ಲಿ ಹೇಳಿದಿರಿ,ಆಗಲೂ ಬಹಳ ಸೀರಿಯಸ್ ಆಗಿ ಕುಡಿಯುವ ನೀರಿನ ಅಭಾವ ಇತ್ತು. ಅದರೂ ನಾವು ಷಟ್ ಡೌನ್ ಮಾಡಿರಲಿಲ್ಲ. ಈಗ ವಾರದಲ್ಲಿ ಎರಡು ದಿನ ನೀರುಕೊಡುತ್ತಾ ಇಲ್ಲ. ನಾನು ಹೇಳಿದ ರೀತಿಯಲ್ಲಿ ಮಾಡಿದರೆ, ಪ್ರತಿ ದಿನವೂ ನೀರು ಕೊಡಬಹುದು.ಈಗ ನೀವು ಎರಡು ದಿನ ನೀರು ನಿಲ್ಲಿಸುತ್ತೇವೆಂದು ಹೇಳಿದ್ದೀರಿ, ಆದರೆ ವಾರದಲ್ಲಿ 3-4 ದಿನ ನೀರು ಸಿಕ್ಕುತ್ತಾ ಇಲ್ಲ. ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ದಯಮಾಡಿ ಈ ಪರಿಸ್ಥಿತಿಯನ್ನು ನಿಮ್ಮ ಮಟ್ಟದಲ್ಲಿಯೇ ಮಾಡಿ. ಕೇವಲ ಪಿ.ಡಬ್ಲ್ಯುಡಿ. ಚೀರ್ಮನ್ನರು ಮತ್ತಿತರ ಅಧಿಕಾರಿಗಳ ಲೆವಲ್‌ನಲ್ಲಿ ಮಾಡಬೇಡಿ. ಎಲ್ಲೆಲ್ಲಿ ಏನೇನು ನಡೆಯುತ್ತಿದೆ. ಏನೇನು ಕೊರತೆ ಇದೆ ಎನ್ನುವುದನ್ನು ತಿಳಿದುಕೊಂಡು ಮಾಡಬೇಕಾಗುತ್ತದೆ. ಈ ರೀತಿ ಮಾಡದೇ ಹೋದರೆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅದೇ ಪ್ರಕಾರ ತಾವು 30 ಲಾರಿಗಳ ಮುಖಾಂತರ ನೀರನ್ನು ಕೊಡುತ್ತಿದ್ದೇವೆಂದು ಹೇಳಿದ್ದೀರಿ. ಈ ಲೆಕ್ಕ ನನ್ನ ಹತ್ತಿರ ಇಲ್ಲ. ಆದರೆ ಹೆಚ್ಚಿನ ಪ್ರಮಾಣದಲ್ಲಿ ಲಾರಿಗಳನ್ನು ಕೊಡಬೇಕಾಗುತ್ತದೆ. ಎಲ್ಲೆಲ್ಲಿ ಕುಡಿಯುವ ನೀರಿನ ಅಭಾವ ಇದೆ. ಎಲ್ಲೆಲ್ಲಿ ಮಿನಿ ವಾಟರ್ ಸ್ಕೀಮ್ಸ್ ಇಲ್ಲ ಅಂತಹ ಕಡೆಗಳಲ್ಲಿ ಹೈಯೀಲ್ಡ್ ಬೋರ್‌ವೆಲ್ಸ್ ಮುಖಾಂತರ, ಲಾರಿಗಳ ಮುಖಾಂತರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಇನ್ನು ಕಾವೇರಿ ಮೂರನೇ ಹಂತದ ಯೋಜನೆ ಬಗ್ಗೆ ಟಾಪ್ ಪ್ರಿಯಾರಿಟಿ ಕೊಡಬೇಕು. ಈ ಯೋಜನೆಗೆ ಹಣ ಬಿಡುಗಡೆ ಮಾಡಬೇಕು. ಏಕೆಂದರೆ ಕುಡಿಯುವ ನೀರಿನ ಸಮಸ್ಯೆ ಬರುವುದರಿಂದ. ತಾವು ಈ ದೃಷ್ಟಿಯಲ್ಲಿ ಪ್ರಯತ್ನ ಮಾಡಬೇಕು. ತಾವು ಬೆಂಗಳೂರಿನವರೇ ಆಗಿರುವುದರಿಂದ , ಹೆಚ್ಚಿನ ಚಿಂತನೆ ಇರಬೇಕು. ತಾವು ಈ ದೃಷ್ಟಿಯಿಂದ ಕೆಲಸ ಮಾಡುತ್ತೀರೆಂಬ ವಿಶ್ವಾಸ ಇದೆ. ನಾಳೆ ಅವರು ಧರಣಿ ಸತ್ಯಾಗ್ರಹ ಮಾಡುವುದಕ್ಕೆ ಮುಂಚೆಯೇ, ತಾವು ಏನು ಕ್ರಮ ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ಹೇಳಬೇಕು. ಮತ್ತು ನನ್ನ ಸಲಹೆಗಳ ಮೇಲೆ ತಮ್ಮ ಅಭಿಪ್ರಾಯ ಏನು ಎನ್ನುವುದನ್ನು ಹೇಳಬೇಕೆಂದು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ನಾನು ತಮಗೆ ಒಂದು ಪತ್ರ ಬರೆದಿದ್ದೆ....

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ದೇಶಪಾಂಡೆಯವರು , ಬೆಂಗಳೂರು ನಗರದ ನೀರಿನ ಅಭಾವದ ವಿಚಾರವಾಗಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಅವುಗಳಲ್ಲಿ ಕೆಲವನ್ನು ನಾನು ಒಪ್ಪುತ್ತೇನೆ. ಆದರೆ, ಅವರು ಕೆಲವು ಟೀಕೆಗಳನ್ನು ಸಹ ಮಾಡಿದ್ದಾರೆ, ಮೊಟ್ಟ ಮೊದಲನೆಯದಾಗಿ, ನಾನು ಮಂತ್ರಿಯಾದ ಮೇಲೆ, ನೀರಿನ ಅಭಾವ ಬರುತ್ತದೆಂದು ತಿಳಿದು, ಬೆಂಗಳೂರು ನಗರದ ಶಾಸಕರ ಮತ್ತು ನೀರು ಸರಬರಾಜು ಮಂಡಳಿ ಅಧಿಕಾರಿಗಳನ್ನು ಕರೆಯಿಸಿ, 2-3 ಸಭೆಗಳನ್ನು ಮಾಡಿದ್ದೇನೆ. ಬೆಂಗಳೂರು ನಗರ ಪಾಲಿಕೆಯ ವಿರೋಧಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡಿ, ಮೊಟ್ಟ ಮೊದಲನೆಯದಾಗಿ ಈ ಬೋರ್ ವೆಲ್ಸ್‌ಗಳೇನಿವೆ, ಇವುಗಳ ದುರಸ್ತಿ ಕಾರ್ಯವನ್ನು ಅತ್ಯಂತ ತುರ್ತಾಗಿ ಮಾಡುವಂಥ ಕಾರ್ಯಕ್ಕೆ ಮೂರು ನಿರ್ವಹಣಾ ವಿಭಾಗಗಳನ್ನು ಮಾಡಿದ್ದೇವೆ. ಮತ್ತೆ ಒಂದು ಕಂಟ್ರೋಲ್ ರೂಮ್ ಮಾಡಿ, ಅಲ್ಲಿ ಫೋನ್ ಸಂಪರ್ಕ ಕಲ್ಪಿಸಿ, ಏನಾದರೂ ದೂರುಗಳಿದ್ದರೆ, ತಕ್ಷಣ ತಿಳಿಸುವಂತೆ ಮಾಡಿದ್ದೇವೆ. ಮಾನ್ಯ ದೇಶಪಾಂಡೆಯವರಿಗೆ ಇವೆಲ್ಲಾ ಗೊತ್ತಿರಲಿಕ್ಕಿಲ್ಲ, ಬರೀ ಕಾರ್ಯಕ್ರಮ ಹಾಕಿದರೆ ಸಾಲದು, ಅವುಗಳಿಗೆ ಹಣವನ್ನು ಒದಗಿಸುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಬೆಂಗಳೂರು ನಗರ ಪಾಲಿಕೆಯಿಂದ ಮೂನ್ನೂರು ಕೊಳವೆ ಬಾವಿಗಳನ್ನು ಹಾಕುತ್ತಿದ್ದೇವೆ.

ಈ ಕೆಲಸವನ್ನು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಮತ್ತೆ ಇನ್ನೂ 300 ಕೊಳವೆ ಬಾವಿಗಳನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯಿಂದ ಹಾಕುವ ಕೆಲಸ ಮಾಡುತ್ತಿದ್ದೇವೆ. 1985-86ನೇ ಇಸವಿಯಲ್ಲಿ ನಾನೂ ಶಾಸಕನಾಗಿದ್ದೆ. ಆಗ ಸಾಕಷ್ಟು ನೀರು ಇತ್ತು. ಆದರೆ ಮೊಟ್ಟ ಮೊದಲ ಬಾರಿಗೆ ಇಡೀ ತಿಪ್ಪಗೊಂಡನಹಳ್ಳಿ, ಟ್ಯಾಂಕ್‌ನಲ್ಲಿ ಇಷ್ಟೊಂದು ಕಡಿಮೆ ಪ್ರಮಾಣದಲ್ಲಿ ನೀರು ಬಂದಿದೆ. 1985-86ನೇ ಇಸವಿಯಲ್ಲಿ ಅದರಲ್ಲಿ ಎಷ್ಟು ನೀರು ಇತ್ತು ಎಂದು ನಾನು ಹೇಳಿದ್ದೇನೆ. ಆಗ ಎಷ್ಟು ವಾಟರ್ ಕನೆಕ್ಷನ್ ಇತ್ತು ಎಂದು ಹೇಳಿದ್ದೇನೆ. ಐದು ವರ್ಷಕ್ಕೆ ಕನೆಕ್ಷನ್ಸ್ ಸಾಕಷ್ಟು ಜಾಸ್ತಿಯಾಗಿದೆ. ಹೈ ಕನ್ಸ್ಯೂಮರ್ಸ್ ಸಹ ಹೆಚ್ಚಾಗಿದ್ದಾರೆ. ಇವರಿಗೆಲ್ಲಾ ನೀರನ್ನು ಒದಗಿಸಬೇಕಾಗಿದೆ. 1985-86ನೇ ಇಸವಿಯಲ್ಲಿ ಮಾನ್ಯ ಲಕ್ಷ್ಮೀಸಾಗರ್ ಅವರು ಮಂತ್ರಿಗಳಾಗಿದ್ದರು. ಆಗ ರಾಜಾಜಿನಗರ ಹಾಗೂ ಅರ್ಕಾವತಿ ಕನೆಕ್ಷನ್ಸ್ ಎಲ್ಲೆಲ್ಲಿದೆ ಅಲ್ಲೆಲ್ಲಾ ದಿನಬಿಟ್ಟು ದಿನ ನೀರು ಕೊಡುವ ಕಾರ್ಯಕ್ರಮ ಹಾಕಿದ್ದರು. ಇದು ದೇಶಪಾಂಡೆಯವರಿಗೆ ಗೊತ್ತಿರಲಿಕ್ಕಿಲ್ಲ ಎಂದು ಕಾಣುತ್ತಿದೆ. ಆ ಸಮಯದಲ್ಲಿ ಕಾವೇರಿ ಲಿಂಕ್ ಎಲ್ಲಾ ಕಡೆ ಇರಲಿಲ್ಲ, ಇವತ್ತು ನಮಗೆ ತಿಪ್ಪಗೊಂಡನಹಳ್ಳಿ ಹಾಗೂ ಹೆಸರಘಟ್ಟದಿಂದ ಬರುವ ನೀರು ಕಡಿಮೆಯಾಗಿದೆ. ಕೇವಲ ಕಾವೇರಿ ಮೂಲದಿಂದ ಬರುವ ನೀರನ್ನು ಮಾತ್ರ ಅವಲಂಬಿಸಿ ಡಿಸ್ಟ್ರಿಬ್ಯೂಷನ್ ಮಾಡಬೇಕಾಗಿದೆ. ಒಂದು ಒಳ್ಳೆಯ . ಸಂಗತಿ ಎಂದರೆ ಇವತ್ತು 90-95 ಭಾಗಕ್ಕೆ ಕಾವೇರಿ ಲಿಂಕ್ ಮಾಡಿದ್ದೇವೆ. ಇರುವಷ್ಟು ನೀರನ್ನು ಸಮರ್ಪಕವಾಗಿ ಎಲ್ಲಾ ಕಡೆ ವಿತರಣೆ ಮಾಡುವ ಕೆಲಸ ಮಾಡಿದ್ದೇವೆ. ಎರಡು ಸಾವಿರ ಗ್ಯಾಲನಿಗಿಂತ ಹೆಚ್ಚು ಬರುವ ಕೊಳವೆ ಬಾವಿಗಳನ್ನು ಎನರ್ಜೈಸ್ ಮಾಡಬೇಕೆಂದು ಹಿಂದೆ ಇದ್ದ ಸರಕಾರದವರು ಮಾಡಿದ್ದರು. ಆಗ ಕೇವಲ 17 ಬಾವಿಗಳಿಗೆ ಮಾತ್ರ ಎನರ್ಜೈಸ್ ಮಾಡಲಾಗಿತ್ತು. ಆದರೆ ಇವತ್ತು ನಮ್ಮ ಸರಕಾರ ಒಂದು ತೀರ್ಮಾನ ಮಾಡಿ 394 ಕೊಳವೆ ಬಾವಿಗಳಿಗೆ ಎನರ್ಜೈಸ್ ಮಾಡಿ ಮಿನಿ ವಾಟರ್ ಟ್ಯಾಂಕ್ ಗಳನ್ನು ಪ್ರೊವೈಡ್ ಮಾಡಿ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿದ್ದೇವೆ. ಅದಕ್ಕೆ ಹಣ ಒದಗಿಸಿಕೊಟ್ಟಿದ್ದು ಈಗಾಗಲೇ ಕೆಲಸ ಪ್ರಾರಂಭವಾಗಿದೆ. ಕಾವೇರಿ ಮೂರನೇ ಸ್ಟೇಜ್ ಬಗ್ಗೆ ಮಾನ್ಯ ರಾಮಕೃಷ್ಣ ಹೆಗ್ಗಡೆಯವರು ಕೇಳಿದಾಗ ನಾನು ಹೇಳಿದ್ದೇನೆ. ಇದಕ್ಕೆ ತಾವು 84ನೇ ಇಸವಿಯಲ್ಲಿ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟಿದ್ದೀರಿ. ಆದರೆ ಆಕ್ಚುಯಲ್ ಆಗಿ ಕೆಲಸ ಪ್ರಾರಂಭವಾಗಿದ್ದುದು 87ನೇ ಇಸವಿಯಲ್ಲಿ, ಇದನ್ನು 85ನೇ

ಇಸವಿಯಲ್ಲಿ ಪ್ರಾರಂಭ ಮಾಡಿ 90ರೊಳಗಾಗಿ ಮುಗಿಸಬೇಕೆಂದು ಇತ್ತು. ಆದರೆ 87ನೇ ಇಸವಿಯಲ್ಲಿ ಪ್ರಾರಂಭ ಮಾಡಿದುದರಿಂದ 91-92ನೇ ಇಸವಿಯಲ್ಲಿ ಇದು ಪೂರ್ಣಗೊಳ್ಳುತ್ತದೆ. ದೇಶಪಾಂಡೆಯವರು ದುಡ್ಡು ಸಾಕಷ್ಟು ಕೊಡುತ್ತಿಲ್ಲ ಎಂದು ಹೇಳಿದರು. ನವೆಂಬರ್ 89ರವರೆಗೆ ಇದಕ್ಕೆ ಕೊಟ್ಟಿದ್ದು 85 ಕೋಟಿ ರೂಪಾಯಿ. ಆದರೆ ನವೆಂಬರ್ 89ರಿಂದ ಡಿಸೆಂಬರ್ 90ರವರೆಗೆ ಹಿಂದಿನದೂ ಸೇರಿ ಒಟ್ಟು 135 ಕೋಟಿ ಕೊಟ್ಟಿದ್ದೇವೆ. ಅಂದರೆ ಒಂದು ವರ್ಷದಲ್ಲಿ ಹಿಂದಿನದೂ ಸೇರಿ ಒಟ್ಟು ರೂಪಾಯಿ ಕೊಟ್ಟಿದ್ದೇವೆ. ಈಗ ಮತ್ತೆ 14 ಕೋಟಿ ಕೊಟ್ಟಿದ್ದೇವೆ. ಬಹುಶಃ ಈ ವರ್ಷ ಒಟ್ಟು 135ಕೋಟಿ ರೂಪಾಯಿನ ಕೆಲಸ ಮಾಡಿದ್ದೇವೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅವರ ಹತ್ತಿರ ಇರುವುದು 145 ಕೋಟಿ ರೂಪಾಯಿ ಫಂಡ್. ಈ ಫಂಡನ್ನು ನಾವು ಕಡಿಮೆ ಮಾಡಲಿಲ್ಲ. ಇದಕ್ಕೆ ಸಾಕಷ್ಟು ಫಂಡ್ ಕೊಟ್ಟಿದ್ದೇವೆ. ಬಹುಶಃ ಈ ಯೋಜನೆಯಿಂದ ನೀರು ಡಿಸೆಂಬರ್ ವೇಳೆಗೆ ಬೆಂಗಳೂರು ನಗರಕ್ಕೆ ಬರುತ್ತದೆ. ಆದರೆ ಬೆಂಗಳೂರು ನಗರದಲ್ಲಿ ರಿಸರ್ವಾಯರ್ ಆಗುವುದಕ್ಕೆ ತಡವಾಗುತ್ತಿದೆ. ವರ್ಷೇ ವರ್ಷೇ ಕಡಿಮೆ ಮಳೆಯಾಗುತ್ತಿರುವುದರಿಂದ ತಿಪ್ಪಗೊಂಡನಹಳ್ಳಿಗೆ ನೀರು ಬರುವುದು ಕಡಿಮೆಯಾಗಿದೆ. ಪ್ರತಿ ವರ್ಷ ತೊಂದರೆ ಬಂದರೂ ಸಹ, ಕಾವೇರಿ ನೀರು ಬಂದರೆ ಅದನ್ನು ಪೈಪ್‌ಲೈನ್ ಮೂಲಕ ಕೊಡುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಸರಕಾರ ಬಂದ ಮೇಲೆ, ನಾನು ಸಚಿವನಾದ ಮೇಲೆ, ಬೆಂಗಳೂರು ನಗರದಲ್ಲಿ ಸಾಕಷ್ಟು ಪ್ರವಾಸ ಮಾಡಿದ್ದೇನೆ, ಒಬ್ಬ ಮಂತ್ರಿಯಾಗಿ ಎಲ್ಲಾ ಕಡೆ ಓಡಾಡುವುದಕ್ಕೆ ಆಗುವುದಿಲ್ಲ. ಬಹಳ ಸೀರಿಯಸ್ ಆಗಿರುವ ಕಡೆ ಹೋಗಿದ್ದೇನೆ. ಮಾನ್ಯ ದೇಶಪಾಂಡೆಯವರು ಹೇಳಿದ್ದುದು ನನ್ನ ಗಮನಕ್ಕೆ ಬಂದಿರಲಿಲ್ಲ, ನನ್ನ ಗಮನಕ್ಕೆ ಬಂದಿದ್ದರೆ ನೇರವಾಗಿ ಹೋಗುತ್ತಿದ್ದೆ. ಮಂತ್ರಿಯಾಗಿ ಪ್ರತಿಯೊಂದು ಜಾಗಕ್ಕೂ ಹೋಗುವುದಕ್ಕೆ ಆಗುವುದಿಲ್ಲ. ನಾನು ಮಂತ್ರಿಯಾಗಿ, ನಮ್ಮ ಶಾಸಕರು ಯಾರಿದ್ದಾರೆ, ಅವರ ಅಧ್ಯಕ್ಷತೆಯಲ್ಲಿ ಆಯಾ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಒಂದೊಂದು ಕಮಿಟಿ ಮಾಡಿದ್ದೇನೆ. ಇದಕ್ಕೆ ಲೋಕಲ್ ಕಾರ್ಪೋರೇಟರ್ಸ್‌ನ್ನು ಮೆಂಬರ್ಸ್ ಮಾಡಿದ್ದೇವೆ. ಬೆಂಗಳೂರು ವಾಟರ್ ಸಪ್ಲೈ ಎಕ್ಸಿಕ್ಯುಟೀವ್ ಎಂಜಿನಿಯರ್ ರವರು ಇದಕ್ಕೆ ಕನ್ವೀನರ್ ಆಗಿದ್ದಾರೆ. ಯಾವುದೇ ಸಮಸ್ಯೆಗಳಿದ್ದರೂ ಆ ಲೆವಲ್ ನಲ್ಲಿ ಪರಿಹಾರ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಅಭಾವ ಪರಿಸ್ಥಿತಿ ನಿಜವಾಗಿಯೂ ದುರಾದೃಷ್ಟಕರವಾದುದು. ಮಳೆ ಫೇಲ್ ಆಗಿದ್ದಕ್ಕೆ ಈ ರೀತಿ ಆಗಿದೆ. ಮೊದಲು ವಾರಕ್ಕೆ ಒಂದು ಸಲ ನೀರು ನಿಲ್ಲಿಸುವ ಕೆಲಸ ಮಾಡಿದ್ದೆವು. ಸಾಕಷ್ಟು ನೀರು ರಿಸರ್ವಾಯರ್‌ನಲ್ಲಿ ಇಲ್ಲದಿದ್ದರೆ ಪ್ರೆಜರ್ ಕಡಿಮೆಯಾಗಿ, ಮಂಗಳವಾರ ನೀರು ನಿಲ್ಲಿಸಿದರೆ, ಪೈಪ್ ಖಾಲಿಯಾಗಿ , ಏರ್ ತುಂಬಿಕೊಂಡು, ಬುಧವಾರ, ಗುರುವಾರ ತೊಂದರೆ ಉಂಟಾಗುತ್ತಿತ್ತು. ಅದಕ್ಕಾಗಿ ಟೆಕ್ನಿಕಲ್ ಅಡ್ವೈಸ್ ಪ್ರಕಾರ ವಾರಕ್ಕೆ ಎರಡು ಸಲ ನೀರು ನಿಲ್ಲಿಸುವ ವ್ಯವಸ್ಥೆಯಾಗಿದೆ. ವಾಟಾಳ್ ನಾಗರಾಜ್ ರವರು ಹೇಳಿದ ಹಾಗೆ ವಾರಕ್ಕೆ ಒಂದು ಸಲ ನೀರು ಕೊಡುವುದಿಲ್ಲ, ವಾರಕ್ಕೆ ಐದು ದಿವಸ ನೀರು ಕೊಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಸರ್ಕಾರ ಈಗಾಗಲೇ ಕುಡಿಯುವ ನೀರಿನ ವಿಚಾರದಲ್ಲಿ ಸಾಕಷ್ಟು ಸಮಸ್ಯೆಯನ್ನು ಎದುರಿಸಿದೆ. ತಾವು ಕೊಟ್ಟ ಸಲಹೆಗಳನ್ನು ಸರ್ಕಾರ ಗಣನೆಗೆ ತೆಗೆದುಕೊಂಡು ಕೆಲಸ ಮಾಡುತ್ತದೆ. ಯಾವುದೇ ಪಕ್ಷದ ಸದಸ್ಯರನ್ನಾಗಲಿ ನನ್ನನ್ನು ಬಂದು ಭೇಟಿ ಮಾಡಿ ಸಲಹೆ ಕೊಡಬಹುದು ಮತ್ತು ನಾಳೆ ಅಸೆಂಬ್ಲಿಯಲ್ಲಿ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ತಮ್ಮನ್ನೆಲ್ಲಾ ಕರೆದು ತಮ್ಮ ಸಲಹೆ ಪಡೆಯುತ್ತೇನೆ. ತಾವು ಕೊಟ್ಟ ಸಲಹೆಗಳನ್ನು ಸರ್ಕಾರ ಸ್ವಾಗತ ಮಾಡಿ ಕೆಲಸ ಪ್ರಾರಂಭ ಮಾಡುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ತಾವು ತಮ್ಮ ಕಾರ್ಯಕ್ರಮೆಗಳನ್ನು ಹೇಳಿದಿರಿ ಸಂತೋಷ. ತಾವು ತಮ್ಮ ಉತ್ತರದಲ್ಲಿ ಹಿಂದೆ ಪತ್ರಿಕಾ ಹೇಳಿಕೆಯಲ್ಲಿ ಏನು

ಹೇಳಿದ್ದೀರೋ ಅದನ್ನೇ ಸಹ ಇಲ್ಲಿ ಶಾಸನಸಭೆಯಲ್ಲಿಯೋ ಹೇಳಿದ್ದೀರಿ. ಕಳೆದ ಮೂರು ತಿಂಗಳುಗಳಿಂದಲೂ ಇದನ್ನೇ ತಾವು ಹೇಳುತ್ತಾ ಬಂದಿದ್ದೀರಿ. ತಮ್ಮ ಸ್ಟೇಟ್ ಮೆಂಟ್‌ನಲ್ಲಿ ಎಷ್ಟು ಹಣ ಬಿಡುಗಡೆ ಮಾಡುತ್ತೀರಿ ಎನ್ನುವ ಬಗ್ಗೆ ಏನನ್ನೂ ಹೇಳಿಲ್ಲ.ಈಗ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡುತ್ತದೆ ಎನ್ನುವುದನ್ನು ಹೇಳಿ?

ಶ್ರೀ ಕೆ.ಜೆ. ಜಾರ್ಜ್ : ಸರ್ಕಾರದಿಂದ ಬೆಂಗಳೂರು ನಗರ ನೀರು ಸರಬರಾಜು ಮಂಡಲಿಗೆ 1 ಕೋಟಿ 35 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅದೇ ರೀತಿ ಬಿ.ಡಿ.ಎ.ದಿಂದ 75ಲಕ್ಷ ಮತ್ತು ಕಾರ್ಪೋರೇಷನ್‌ನಿಂದ ಬೆಂಗಳೂರು ನಗರ ನೀರು ಸರಬರಾಜು ಮಂಡಲಿಗೆ ಮಿನಿವಾಟರ್ ಸಪ್ಲೈಗೆ 35 ಲಕ್ಷ ರೂಪಾಯಿಗಳನ್ನು ಮಾಡುವಂತಹ ಕೆಲಸ ಮಾಡಿದ್ದೇವೆ. ಮತ್ತೆ ಕಾರ್ಪೋರೇಷನ್‌ನವರು 300 ಕೊಳವೆ ಬಾವಿಗಳನ್ನು ತೆಗೆಯತಕ್ಕಂಥ ಕೆಲಸ ಮಾಡಿದ್ದಾರೆ.

(2) ಮಂಗಳೂರು ಮಹಾನಗರ ಪ್ರದೇಶದಲ್ಲಿ ಬರುವ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೇ ಮಂಗಳೂರು ಮಹಾನಗರ ಪ್ರದೇಶದಲ್ಲಿ ಬರುವ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆಯ ಬಗ್ಗೆ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಮಂಗಳೂರು ನಗರಕ್ಕೆ ನೀರು ಸರಬರಾಜನ್ನು ನೇತ್ರಾವತಿಯಿಂದ ತುಂಬೆಯ ಬಳಿ ಇರುವ ಎರಡು ಮೂಲ ಸ್ಥಾವರಗಳಿಂದ ಮಾಡಲಾಗುತ್ತಿದೆ. ಇವುಗಳಲ್ಲಿ ಒಂದು ಮೂಲ ಸ್ಥಾವರವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿರ್ವಹಿಸುತ್ತಿದ್ದು ಇನ್ನೊಂದು ಮೂಲಸ್ಥಾವರವನ್ನು ಮಂಗಳೂರು ನಗರಸಭೆಯವರೇ ನಿರ್ವಹಿಸುತ್ತಿದ್ದಾರೆ. ಮೇಲಿನ ಜಲಮೂಲಗಳಿಂದ ಕ್ರಮವಾಗಿ ದಿನಂಪ್ರತಿ 18 ದಶಲಕ್ಷ ಗ್ಯಾಲನ್ ಮತ್ತು 2.25 ದಶಲಕ್ಷ ಗ್ಯಾಲನ್ ನೀರನ್ನು ಪಂಪು ಮಾಡಲು ವಿನ್ಯಾಸಗೊಳಿಸಲಾಗಿದೆ. ಇತ್ತೀಚೆಗೆ ಎರಡು ತಿಂಗಳುಗಳಿಂದ ಪ್ರತಿದಿನ ಸುಮಾರು 5.00 ಘಂಟೆಗಳ ಕಾಲ ವಿದ್ಯುತ್ ಕಡಿತವಿದ್ದು, ಹಾಗೂ ವಿದ್ಯುತ್ ವೋಲ್ಟೇಜಿನಲ್ಲಿ ಕಡಿಮೆಯಾಗುತ್ತಿರುವ ಕಾರಣಗಳಿಂದ ದಿನಂಪ್ರತಿ ಕೇವಲ 17 ಘಂಟೆಗಳ ಕಾಲ ಮಾತ್ರ ನೀರನ್ನು ಪಂಪು ಮಾಡಲಾಗುತ್ತಿದೆ. ಇದರಿಂದಾಗಿ ಮಂಡಳಿಯು ನಿರ್ವಹಿಸುತ್ತಿರುವ ಮೂಲ ಸ್ಥಾವರದಿಂದ ದಿನಂಪ್ರತಿ 13 ದಶಲಕ್ಷ ಗ್ಯಾಲನ್ ನೀರು ಮಾತ್ರ ದೊರಕುತ್ತಿದೆ. ಈ 13 ದಶಲಕ್ಷ ಗ್ಯಾಲನ್ ನೀರಿನ ಪ್ರಮಾಣದಲ್ಲಿ 7 ದಶಲಕ್ಷ ಗ್ಯಾಲನ್ ನೀರನ್ನು ಮಂಗಳೂರು ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ. ಮಂಗಳೂರು ನಗರಸಭೆಯವರು ನಿರ್ವಹಿಸುತ್ತಿರುವ ಮೂಲ ಸ್ಥಾವರದಿಂದ ದಿನಂಪ್ರತಿ ಕೇವಲ 1.5 ದಶಲಕ್ಷ ಗ್ಯಾಲನ್ ನೀರನ್ನು ಪಂಪು ಮಾಡಲಾಗುತ್ತಿದೆ. ಈ ನಗರದ ವಿತರಣಾ ವ್ಯವಸ್ಥೆಯನ್ನು ನಗರಸಭೆಯೇ ನಿರ್ವಹಿಸುತ್ತಿದೆ. ನಗರದ ಕೆಲವು ಪ್ರದೇಶಗಳಲ್ಲಿ ಹಾಲಿ ವಿತರಣಾ ವ್ಯವಸ್ಥೆಯೂ ಸಮರ್ಪಕವಾಗಿಲ್ಲದಿರುವುದರಿಂದ, ಈ ಕೆಳಕಂಡ ಪ್ರದೇಶಗಳಲ್ಲಿ ನೀರಿನ ಸರಬರಾಜು ಸರಿಯಾಗಿಲ್ಲ.

1) ಪಣಂಬೂರು 2) ಸುರತ್ಕಲ್ 3) ಬೈಕಂಪಾಡಿ 4) ಶ್ರೀನಿವಾಸನಗರ

ಮಂಗಳೂರು ನಗರದ ವಿತರಣಾ ಕೊಳವೆ ಮಾರ್ಗದ ವ್ಯವಸ್ಥೆಯನ್ನು ಉತ್ತಮ ಪಡಿಸಲು ಸರ್ಕಾರವು ಆದೇಶ ಸಂಖ್ಯೆ ವನಇ 214 ಯುಎಂಎಸ್ 89, ದಿನಾಂಕ 30-3-90ರಲ್ಲಿ 14.00 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆ. ಈ ಯೋಜನೆಗೆ ಟೆಂಡರ್ ಗಳನ್ನು ಕರೆಯಲಾಗಿದ್ದು